**ದಿನಾಂಕ: 05.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು: 1,3 ಮತ್ತು 4 ನೇ ಪ್ರತಿವಾದಿ ಪರ ವಕೀಲರಿಂದ**

1) ಶರಣಪ್ಪ ಹುಳಸುರ ಅವರ ಮನೆತನಕ್ಕೆ 10 ಎಕರೆ 23 ಗುಂಟೆ ಇರುತ್ತದೆ. ಅದರ ಸರ್ವೆ ನಂ.70 ಮತ್ತು ಸರ್ವೆ ನಂ.44 ಅಂತಾ ಇದ್ದು ಇನ್ನೊಂದು ಸರ್ವೆ ನಂಬರ ಮಾಹಿತಿ ಇಲ್ಲ. 10 ಎಕರೆ 23 ಗುಂಟೆ ಜಮೀನು ಸದ್ಯ 1 ನೇ ಪ್ರತಿವಾದಿಯ ಕಬ್ಜಾವಹಿವಾಟಿಯಲ್ಲಿ ಇರುತ್ತದೆ ಎಂದರೆ ಸರಿ. ವಾದಿಯರನ್ನು ಮದುವೆ ಮಾಡಿಕೊಟ್ಟ ನಂತರ ಅವರು 1 ನೇ ಪ್ರತಿವಾದಿಯ ಮನೆಗೆ ಹೋಗಿ ಬರುವುದು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಡ ನಂ.529 ನ್ನು ನಾನು ಪರಿಶೀಲನೆ ಮಾಡಿ ನೋಡಿರುತ್ತೇನೆ. ಸದರಿ ಡ ಪ್ರಕಾರ ದಾವಾಸ್ತಿಗಳು ಶರಣಪ್ಪ ಹುಳಸೂರವರಿಂದ 1 ನೇ ಪ್ರತಿವಾದಿಗೆ ಖಾತೆ ವರ್ಗಾವಣೆ ಆಗಿರುತ್ತದೆ. ಸದರಿ ಡ ವನ್ನು ನಾನಾಗಲಿ ಮತ್ತು ನನ್ನ ತಾಯಿ ಮತ್ತು ದೊಡ್ಡಮ್ಮ ಆಗಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಿ:24-12-2019 ರಂದು ಸರ್ವೆ ನಂ.71/2 ಕ್ಕೆ ಸಂಭಂದಿಸಿದಂತೆ ಶರಣಪ್ಪ ವಾದಿಯರಿಗೆ ಗೊತ್ತಿರುವಂತೆ ಒಂದು ಬಕ್ಷೀಷ ಪತ್ರವನ್ನು 1 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಟ್ಟಿದ್ದಾ ಎಂದರೆ ಸರಿಯಲ್ಲ. ಎಮ್.ಆರ್. 13/2019-2020 ಮಂಜೂರು ಆದ ನಂತರ ಅದನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಎಮ್.ಆರ್.ನಂ.ಎಚ್-11-2020-21 ರ ಪ್ರಕಾರ ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸಾಕ್ಷಿ ಆಕುರಿತು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎಮ್.ಆರ್. ಕುರಿತು ಈ 2 ವರ್ಷಗಳ ಹಿಂದೆ ಮಾಹಿಗೆ ಬಂದಿರುತ್ತದೆ. ಸದರಿ ವಿಷಯ ನನಗೆ ಗೊತ್ತಾದ ನಂತರ ನಾನು ಪ್ರತಿವಾದಿ ನಂ.1

ಮತ್ತು 2 ರವರಿಗೆ ಭೇಟಿಯಾಗಿರುತ್ತೇನೆ. ನಾನು ಭೇಟಿಯಾಗಲು ಹೋದಾಗ ನನ್ನೊಂದಿಗೆ ವಾದಿಯರು ಹಾಜರು ಇದ್ದರು.

2) ಪ್ರತಿವಾದಿ ನಂ.1 ಮತ್ತು 2 ತಮ್ಮ ಪ್ರಾಪಂಚಿಕ ಅಡಚಣೆ ಸಲುವಾಗಿ ದಾವಾಸ್ತಿಗಳನ್ನು 3 ಮತ್ತು 4 ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಜಮೀನುಗಳು ಮಾರಾಟ ಮಾಡುವ ಕಾಲಕ್ಕೆ ವಾದಿಯರಿಗೆ ತಲಾ 2 ಲಕ್ಷ ಹಣ ಪ್ರತಿವಾದಿ ನಂ.1 ಮತ್ತು 2 ರವರು ನೀಡಿದ್ದರೂ ಎಂದರೆ ಸರಿಯಲ್ಲ. ಸದರಿ ಖರೀದಿ ವಿಷಯ ವಾದಿಯರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ.

3) ನಾನು ವಿಂಡ ಪಾವರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 1 ನೇ ಪ್ರತಿವಾದಿ ಸಂಭಂದಿಕರು ಪ್ರೋಪೆಸರ್ ಇರುತ್ತಾರೆ ಎಂದರೆ ಸರಿ. ವಾದ ಪತ್ರಕ್ಕೆ ಮಾಹಿತಿಯನ್ನು ಹುಣಸೂರ ಪ್ರೋಪೇಸರ್ ರವರು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಹುಣಸೂರ ಪ್ರೋಪೇಸರ್ ರವರು ಪ್ರತಿ ಮುದ್ದತಿಗೆ ಬಂದು ಹೋಗುತ್ತಾರೆ ಎಂದರೆ ಸಾಕ್ಷಿ ನಾನು ಬರುತ್ತೇನೆ ಎಂದು ನುಡಿಯುತ್ತಾರೆ. ವಾದಿಯರನ್ನು ತಂದು ಸಾಕ್ಷಿ ಮಾಡಿಸಲು ಆಗುವುದಿಲ್ಲ. ನಾನು ಮತ್ತು ಹುಣಸೂರ ಪ್ರೋಪೇಸರ್ ಸೇರಿ ಪ್ರತಿವಾದಿಯರಿಗೆ ಕಿರುಕುಳ ಕೋಡಬೇಕೆಂಬ ದುರುದೇಷದಿಂದ ವಾದಿಯರನ್ನು ಮುಂದು ಮಾಡಿ ಈ ದಾವೆ ದಾಖಲು ಆಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ಖರೀದಿ ಕಾಲಕ್ಕೆ ಪ್ರತಿವಾದಿ ನಂ.1 ರಿಂದ 4 ರವರ ಕಡೆಯಿಂದ ತಲಾ 2 ಲಕ್ಷ ಹಣ ಪಡೆದುಕೊಂಡಿದ್ದರೂ ಸಹ ಈಗ ದಾವಾಸ್ತಿಯನ್ನು ಎತ್ತಿಹಾಕಬೇಕೆಂಬ ದುರುದೇಷದಿಂದ ಖೊಟ್ಟಿ ದಾವೆಯನ್ನು ದಾಖಲಿಸಿ ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4) ವಾದಿಯರಿಗೆ ಕಾಲು ಬೇನೆ ಇದ್ದುದ್ದರಿಂದ ಅವರು ನನಗೆ ಅಧಿಕಾರ ಪತ್ರವನ್ನು ನೀಡಿದ ಮೇರೆಗೆ ನಾನು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ವಾದಿಯರಿಗೆ ಕಾಲು ನೋವು ಇದೆ ಅಂತಾ ತೋರಿಸಲು ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಅಧಿಕಾರ ಪತ್ರದಲ್ಲಿ ವಾದಿಯರಿಗೆ ಕಾಲು ಬೇನು ಇದ್ದ ಕುರಿತು ಮತ್ತು ಅವರಿಗೆ ನಡೆದಾಡಲು ಬರುವುದಿಲ್ಲ ಅಂತಾ ಹೇಳಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು 4 ದಾವಾಸ್ತಿಗಳು ಶರಣಪ್ಪ ಹುಣಸೂರವರಿಂದ ಪ್ರತಿವಾದಿ ನಂ.1 ಮತ್ತು 2 ರವರಿಗೆ ಬಕ್ಷೀಷ ಮತ್ತು ವಾರಸಾ ನಾತೆಯಿಂದ ಖಾತೆ ವರ್ಗಾವಣೆ ಆಗಿ ಇರುವುದನ್ನು ನೋಡಿಕೊಂಡು ಪ್ರತಿವಾದಿ ನಂ.3 ಮತ್ತು 4 ಸೂಸಂಬಂಧ ಖರೀದಿದಾರರು ಅಂತಾ ದಾವಾಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶರಣಪ್ಪ ಹುಳಸೂರವರಿಗೆ ಅವರು ತಮ್ಮ ಜೀವಿತಾವಧಿಯಲ್ಲಿ ಪ್ರತಿವಾದಿ ನಂ.1 ಮತ್ತು 2 ರವರಿಗೆ ದಾವಾಸ್ತಿಗಳನ್ನು ಬಕ್ಷೀಷ ಮೂಲಕ ನೀಡದ್ದರಿಂದ ವಾದಿಯರಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ಶರಣಪ್ಪರವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಹಾಗೂ ಅವರು ಅನಕ್ಷಸ್ಥರು ಇದ್ದು ಅದರ ದುರುಪಯೋಗ ಪಡೆದುಕೊಂಡು ಮೋಸತನದಿಂದ ಸದರಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ಮತ್ತು 2 ರವರು ಮೋಸ ಮಾಡಿರುತ್ತಾರೆ ಅಂತಾ ದೂರಿ ಯಾವುದೇ ಪ್ರಕರಣ ದಾಖಲು ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾವು ದಾವಾಸ್ತಿಯಲ್ಲಿ ಹಕ್ಕುದಾರ ಅಂತಾ ಕೇಳಿ ಘೋಷಣೆಯನ್ನು ಕೇಳಿಲ್ಲ ಎಂದರೆ ಸರಿಯಲ್ಲ. ವಾದ ಪತ್ರಕ್ಕೆ ಮಾಹಿತಿ ನೀಡುವ ಕಾಲಕ್ಕೆ ವಾದಿಯರೊಂದಿಗೆ ನಾನು ಬಂದಿದ್ದೆ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ದುರುದೇಷದಿಂದ ಅವರ ವಿರುದ್ದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ದಾವಾಸ್ತಿಯ ಚೆಕ್ಕ ಬಂದಿ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ದಾವಾಸ್ತಿಗಳ ಸುತ್ತಲು ಹುಣಸೂರ ಅಣ್ಣತಮ್ಮಂದಿರ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿ ಸಾಕ್ಷಿದಾರರು ಯಾರು ಸಹಿ ಮಾಡಿರುತ್ತಾರೆ ಅಂತಾ ಮಾಹಿತಿ ಇಲ್ಲ. ಖರೀದಿ ಪತ್ರವನ್ನು ಯಾರು ಬರೆದರು ಅಂತಾ ನಾನು ಪರಿಶೀಲನೆ ಮಾಡಿ ನೋಡಿರುವುದಿಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

1 ನೇ ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.